ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 443+382

ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ ಹಾಗೂ ಶ್ರೀ ಕೆ.ಎ.ತಿಪ್ಪೇಸ್ವಾಮಿ

ಉತ್ತರಿಸಬೇಕಾದ ದಿನಾಂಕ : 06-03-2020

ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಮುದಾಗಾಮಿ ಯೋಜನೆಗಳಾದ ಕನ್ನಡ ಶಾಸ್ತ್ರೀಯ ಉನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತೆಯಂಥ ಕಾರ್ಯಕ್ರಮಗಳು ಸಮಸ್ಯೆಯಲ್ಲಿ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಬಂದಿದೆ. ನೆನೆಗುದಿಗೆ ಬಿದ್ದಿದ್ದ ಕನ್ನಡ ಭಾಷೆ ಶಾಸ್ತ್ರೀಯ ಅತ್ಯುನ್ನತ ಕೇಂದ್ರಸ್ಥಾಪನೆಗೆ ಕ್ರಮ ವಹಿಸಿದ್ದು, ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ಮೂರು ಎಕರೆ ಜಾಗ ಮಂಜೂರು ಮಾಡಲಾಗಿದೆ. ಪೂರ್ಣ ಪ್ರಮಾಣದಲ್ಲಿ ಕನ್ನಡ ಶಾಸ್ತ್ರೀಯ ಅತ್ಯುನ್ನತ ಕೇಂದ್ರದ ಕಾರ್ಯಾಚರಣೆ ಕ್ರಿಯಾ ಯೋಜನೆ ರೂಪಿಸಲಾಗಿದೆ.
(ಆ)	ಇಲಾಖೆಯ ಧನಸಹಾಯ ವ್ಯವಸ್ಥೆಯನ್ನು ನಂಬಿ ಬದುಕು ಕಟ್ಟಿಕೊಂಡ ಕಲಾವಿದರಿಗೆ ಧನಸಹಾಯಕ್ಕೆ ಹಣ ನಿಗದಿ ಮಾಡದೆ ಕಲಾವಿದರ ಜೀವನ ನಡೆಸಲು ಸಾಧ್ಯವಾಗದಿರುವುದು ನಿಜವೇ: ಕಳೆದ ವರ್ಷ ಅರ್ಜಿ ಪಡೆದು ಸಂಸ್ಥೆಗಳನ್ನು ಆಯ್ಕೆ ಮಾಡಿ ಸರ್ಕಾರದ ಆದೇಶವು ಆಗಿರುವ ಸಂಸ್ಥೆಗಳಿಗೆ ಹಣ ಬಿಡುಗಡೆಯಾಗಿದ್ದು ಗಡಿ ಅಭಿವೃದ್ಧಿ ಪ್ರಾಧಿಕಾರ ಖಾತೆಯಲ್ಲಿ ರೂ.12 ಕೋಟಿಗೂ ಹೆಚ್ಚು ಹಣ ಇರುವುದು ನಿಜವೇ;	2018-19ನೇ ಸಾಲಿನಲ್ಲಿ ಸಾಮಾನ್ಯ ಹಾಗೂ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಧನಸಹಾಯಕ್ಕೆ ಸಂಘ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು ಪರಿಶೀಲಿಸಿ ಕ್ರಮವಹಿಸುವ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಗೊಂಡ ಹಿನ್ನೆಲೆಯಲ್ಲಿ, ನಿಗದಿಪಡಿಸಿದ ಮೊತ್ತವು ವ್ಯಪಗತವಾಗುವ ಕಾರಣದಿಂದಾಗಿ ಧನಸಹಾಯಕ್ಕಾಗಿ ಕಾದಿರಿಸಿದ ಮೊತ್ತವನ್ನು ಕಾರ್ಯದರ್ಶಿಗಳು ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಖಾತೆಯಲ್ಲಿ ಕಾದಿರಿಸಿದ್ದು, ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ಸರ್ಕಾರದ ಆದೇಶ ಸಂಖ್ಯೆ ಕಸಂವಾ 238 ಕಸಧ 2019, ದಿನಾಂಕ.15-07-2019ರ ಆದೇಶದ ಮೇರೆಗೆ ಧನಸಹಾಯಕ್ಕೆ ಆಯ್ಕೆಯಾದ ಸಂಸ್ಥೆಗಳಿಗೆ ಧನಸಹಾಯವನ್ನು ಬಿಡುಗಡೆ ಮಾಡಲಾಗಿದೆ.
(ಇ)	ಹಾಗಿದ್ದಲ್ಲಿ, ಧನಸಹಾಯಕ್ಕೆ ನಿಗದಿಯಾದ ಹಣವನ್ನು ಬಡಕಲಾವಿದರಿಗೆ ಯಾವ ಕಾಲಮಿತಿಯಲ್ಲಿ ವಿತರಿಸಲು ಸರ್ಕಾರ ಚಿಂತಿಸಿದೆ ಮತ್ತು ಈ ಬಗ್ಗೆ ಕೈಗೊಂಡ ಕ್ರಮಗಳೇನು?	ಸರ್ಕಾರದ ಆದೇಶ ಸಂಖ್ಯೆ.ಕಸಂವಾ 238 ಕಸಧ 2019, ದಿನಾಂಕ.15-07-2019ರ ಆದೇಶದ ಮೇರೆಗೆ 2018-19ನೇ ಸಾಲಿನಲ್ಲಿ ಧನಸಹಾಯ ಪಡೆಯಲು ಆಯ್ಕೆಯಾದ ಸಂಸ್ಥೆಗಳಿಗೆ ಆದೇಶವಾದ 02 ತಿಂಗಳ ಅವಧಿಯಲ್ಲಿ ಸಂಸ್ಥೆಗಳನ್ನು ಸಂಪರ್ಕಿಸಿ ಬ್ಯಾಂಕ್ ಖಾತೆ ವಿವರ ಪಡೆದು ಮೂಲಕ ಅನುದಾನವನ್ನು ಕಾರ್ಯದರ್ಶಿಗಳು ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಂಸ್ಥೆಗಳಿಗೆ ದಿನಾಂಕ.31-07-2019, 27-08-2019, 04-09-2019, 13-09-2019ಗಳಂದು ಬಿಡುಗಡೆ ಮಾಡಲಾಗಿದೆ.

ಕಸಂವಾ 10 ಕವಿಸ 2020

(ಸಿ.ಟಿ.ರವಿ)
ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ,
ಯುವಜನ ಸಬಲೀಕರಣ ಹಾಗೂ
ಕ್ರೀಡಾ ಇಲಾಖೆ ಸಚಿವರು